▸▸ ರಾಜ್ಯಮಟ್ಟದ ವೈಟ್‌ಲಿಫ್ಟಿಂಗ್ ಚಾಂಪಿನ್‌ಶಿಫ್

# ಸಹ್ಯಾದ್ರಿ ಕಾಲೇಜು ಮಹಿಳಾ ತಂಡ ಚಾಂಪಿಯನ್




ವೈಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ವಿಜೇತರಾದ ತಂಡದ ಸದಸ್ಯರು.

**ಮಹಾನಗರ,** ಅ.18: ಬೆಂಗಳೂರಿನ ಆನೇಕಲ್‌ನ ಶ್ರೀ ಸಾಯಿ ರಾಮ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ ವಿಟಿಯು 20ನೇ ಅಂತರ್ ಕಾಲೇಜು ಭಾರ ಎತ್ತುವ ಸ್ಪರ್ಧೆಯಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಮಹಿಳಾ ವೈಟ್‌ಲಿಫ್ಟಿಂಗ್ ತಂಡವು ರಾಜ್ಯ ಮಟ್ಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

49 ಕೆ.ಜಿ. ವಿಭಾಗದಲ್ಲಿ ದೀಕ್ಷಾ ಪಿ. ಪ್ರಥಮ ಸ್ಥಾನ, 55 ಕೆ.ಜಿ. ವಿಭಾಗದಲ್ಲಿ ಆ್ಯನ್ ವಿ. ಮರಿಯಾ ದ್ವಿತೀಯ ಸ್ಥಾನ, 59 ಕೆ.ಜಿ. ವಿಭಾಗದಲ್ಲಿ ವೈಷ್ಣವಿ ಡಿ.ಕೆ. ಪ್ರಥಮ ಸ್ಥಾನ, 64 ಕೆ.ಜಿ. ವಿಭಾಗದಲ್ಲಿ ಸ್ವಾತಿ ಪ್ರಥಮ ಸ್ಥಾನಗಳನ್ನು ಪಡೆದಿದ್ದಾರೆ.

ಅಲ್ಲದೆ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯದ ವೈಟ್‌ಫ್ಟಿಂಗ್ ಸ್ಪರ್ಧೆಗೆ ದೀಕ್ಷಾ ಪಿ., ವೈಷ್ಣವಿ ಡಿ.ಕೆ., ಸ್ವಾತಿ ಮತ್ತು ನಮ್ರಶಾ ಎನ್. ಗಾಣಿಗಾ ಅವರು ಆಯ್ಕೆಯಾಗಿದ್ದಾರೆ.